ಸಿವಿಲ್ ಮಿಸ್ ಕೇಸ್ ನಂ. 20/2017
**ಪಿಡಬ್ಲ್ಯು.1**

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**
**ದಿನಾಂಕಃ 11.07.2018.**

**<u>ಮುಂದುವರಿದ ಮುಖ್ಯ ವಿಚಾರಣೆಃ</u>** ಶ್ರೀಮತಿ ಆರ್‌ವಿಎನ್ ವಕೀಲರಿಂದ

1. ನನ್ನ ಮುಖ್ಯ ವಿಚಾರಣೆಯ ರೂಪದಲ್ಲಿ ಒಂದು ಪ್ರಮಾಣ ಪತ್ರವನ್ನು ಇಂದು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯವಾಗಿರುತ್ತವೆ. ಅದನ್ನು ನಾನು ಸ್ವತಃ ಮಾಹಿತಿ ಕೊಟ್ಟು ವಕೀಲರ ಮುಖಾಂತರ ಸಿದ್ಧಪಡಿಸಿದ್ದೇನೆ.

2. ನಮ್ಮ ಸಂಘವು ನೊಂದಣಿ ಆದ ಬಗ್ಗೆ ರಜಿಸ್ಟ್ರೇಷನ್ ಸರ್ಟಿಫಿಕೇಟನ ದೃಢೀಕೃತ ನಕಲು ಹಾಜರು ಪಡಿಸಿದ್ದೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನಮ್ಮ ಸಂಘವನ್ನು ನೊಂದಾಯಿಸುವ ಕಾಲಕ್ಕೆ ನಾವು ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ದತ್ತಿ ಕಾಯ್ದೆ ಅಡಿಯಲ್ಲಿ ನಮ್ಮ ಸಘವು ನೊಂದಣಿ ಆದ ಬಗ್ಗೆ ಒಂದು ದಾಖಲೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಮೇಲ್ಕಂಡ ಕಾರಣಗಳಿಗಾಗಿ ನಾನು ಅರ್ಜಿಯಲ್ಲಿ ಕೊರಿಕೊಂಡಂತೆ ನಮ್ಮ ಅರ್ಜಿಯನ್ನು ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ</u> ಎದುರುದಾರರು – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ

ಜಿಲ್ಲಾ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ